# ನಾನೇಕೆ ಪರದೇಶಿ ನಾನೇಕೆ ಬಡವನು

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 149.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 317.
3. **Note:** The lyrics mentioned without highlights are as per Ref. 1. The wordings mentioned separately in yellow highlights are as per Ref. 2.
4. **Note:** The Ankita is different in both the books. We have considered book in Ref.1 as standard and taken that Ankita for listing.
5. **Note:** Many books and websites, including many singers, have considered "nAnEke baDavanu nAnEke paradEshi" is same as "nAnEke paradEshi nAnEke baDavanu". But they are different as per the above references. Even the Ankita is different in these songs. These are listed separately and accordingly.
6. **Note:** I could not find the vocal song for these lyrics.

| | |
|---|---|
| ರಾಗ ಸಾರಂಗ ತಾಳ ಝುರುಝುಂಪೆ | ರಾಗ: ಕೇದಾರ ಗೌಳ ತಾಳ: ಛಾಪು |
| | |
| ನಾನೇಕೆ ಪರದೇಶಿ ನಾನೇಕೆ ಬಡವನೊ | ನಾನೇಕೆ ಪರದೇಶಿ ನಾನೇಕೆ ಬಡವನು |
| ಮಾನಾಭಿಮಾನದೊಡೆಯ ವಿಠ್ಠಲ ಎನಗಿರಲು ‖ ಪ ‖ | ಘನ್ನ ಮಾನಾಭಿಮಾನಕ್ಕೆ ವಿಠ್ಠಲ ನೀನಿರಲಾಗಿ |
| | |
| ಮೂರು ಲೋಕದ ಒಡೆಯ ಶ್ರೀ ಹರಿಯು ಎನ ತಂದೆ | ಮೂರು ಲೋಕದ ಅರಸು ಶ್ರೀ ಹರಿ ಎನ್ನ ತಂದೆ |
| ವಾರಿಜಾಂಬಕೆ ಲಕ್ಷ್ಮಿ ಎನ್ನ ತಾಯಿ | ವಾರಿಜಾಮುಖಿ ಲಕುಮಿ ಎನ್ನ ತಾಯಿ |
| ಮೂರು ಅವತಾರದವರೆನ್ನ ಗುರು ಕಾಣಿರೊ | ಮೂರು ಅವತಾರದ ಹನುಮಂತ ಎನ್ನ ಗುರು |
| ಸಾರಹೃದಯರು ಎನ್ನ ಬಂಧು ಬಳಗ ‖ ೧ ‖ | ಹರಿಭಕ್ತ ಜನರೆಲ್ಲ ಬಂಧು ಬಳಗಿರಲಾಗಿ |
| | |
| ಇಪತ್ತುನಾಲ್ಕು ನಾಮಗಳೆಂಬ ಹಳನಾಣ್ಯ | ಇಪತ್ತುನಾಲ್ಕು ಅಕ್ಷರವೆಂಬೊ ಹಳೇ ನಾಣ್ಯ |
| ಒಪ್ಪುದಲಿ ಉಣಲುಂಟು ಉಡಲುಂಟು ತೆಗೆದು | ಮುಪ್ಪುದಿಂದಲಿ ಕುಳಿತು ಉಣಲಿ ಬಹುದು |
| ತಪ್ಪುದಲೆ ನವಭಕ್ತಿ ಎಂಬ ನವರತ್ನಗಳು | ತಪ್ಪದೆ ನವವಿಧ ಭಕ್ತಿ ಜ್ಞಾನಗಳಿಂದ |
| ಮುಪ್ಪು ಇಲ್ಲದ ಭಾಗ್ಯ ಎನಗೆ ಸಿದ್ಧವಿರಲಿಕ್ಕೆ ‖ ೨ ‖ | ಮುಪ್ಪುಯಿಲ್ಲದ ಭಾಗ್ಯ ಎನ್ನಲ್ಲಿ ಇರಲಾಗಿ |
| | |
| ಎನಗೆ ಎಂಬವನ ಹೆಸರೇನೆಂಬೆ ಶ್ರೀನಿವಾಸ | ನಿನ್ನ ನಂಬಿದವರ ಒಲಿವೆಯೋ ಶ್ರೀ ಹರಿ |
| ತನಗೆಂದರೆಂದು ಬಗೆವನು ಕಾಣಿರೊ | ನಿನಗಿಂತ ಇನ್ನು ಒಲಿವರು ಇಲ್ಲವೋ |
| ಘನ ಮಹಿಮನಾದ ಸಿರಿ ಪುರಂದರ ವಿಠ್ಠಲನು | ಪನ್ನಂಗ ಶಯನ ಶ್ರೀ ಪುರಂದರ ವಿಠ್ಠಲನ |

ಅನುಮಾನವಿರದೆನ್ನ ಶಿರದ ಮೇಲಿರಲಿಕ್ಕೆ    ॥ ೨ ॥    ಚರಣ ಅನುಮಾನವಿಲ್ಲದೆ ಎನ್ನ ಶಿರದಲ್ಲಿರಲಾಗಿ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**"ನಾನೇಕೆ ಬಡವನು ನಾನೇಕೆ ಪರದೇಶಿ"** - ಈ ಹಾಡಿನಲ್ಲಿರುವ ಭಾವವನ್ನೇ ಬೇರೆ ರೀತಿಯಿಂದ ವಿವರಿಸಲಾಗಿದೆ.

**ಮೂರು ಅವತಾರದವರು** = ವಾಯು ದೇವರು

**ಸಾರಹೃದಯರು** = ಸದ್ಭಕ್ತರು

**ಇಪ್ಪತ್ತು ನಾಲ್ಕು ನಾಮ** = ಕೇಶವಾದಿ ಕೃಷ್ಣ ಪರಿಯಂತವಾದ ಇಪ್ಪತ್ತು ನಾಲ್ಕು ನಾಮಗಳು (ಇವುಗಳನ್ನೇ ಪೂರ್ವಕಾಲದ **ಸುವರ್ಣ ನಾಣ್ಯ**ಗಳೆಂದು ತಿಳಿಯಲಾಗಿದೆ)

**Classification:** Keerthane
**Ankita:** siri purandara vittala
**Location:** NA
**Category:** jeevana darshana, bhakti, Aartha Bhava.
**Sub-Category:** badava, paradeshi, srinidhi, loka, tayi, tande, bandhu, abharana, Krishna, Lakshmi, avatara, hrudaya, bangara, srinivasa, muppu, anumana, abhimana, hanuma, Bhagya,
**Pravachana:** NA
**Explanation:** NA